**ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಸಾಗರ.**

ಸಿ.ಸಿ. ನಂ. 1474/2023

ಫಿರ್ಯಾದಿಃ- ವಿರುದ್ಧ ಆರೋಪಿಃ-

| ಫಿರ್ಯಾದಿಃ- | ಆರೋಪಿಃ- |
| --- | --- |
| ಕೃಷಿಕ ಸೌಹಾರ್ದ ಸಹಕಾರ ನಿಯಮಿತ,<br>ಪರವಾಗಿ ಪ್ರತಿನಿಧಿಸುತ್ತಿರುವವರು<br>ಸಿ೩ಬಿ, ಯು.ಬಿ.ಎಸ್. ಬಿಲ್ಡಿಂಗ್,<br>ಮಾರ್ಕೇಟ್ ರಸ್ತೆ, ಸಾಗರ ಟೌನ್. | ಮುಜಮ್ಮಿಲ್ ಬಿನ್ ರಜಾಕ್ ಹೆಚ್,<br>ವಾಸಃ 3 ನೇ ತಿರುವು, ಜನ್ನತ್ ನಗರ,<br>ಸಾಗರ ನಗರ. |

## ಆಪಾದನೆ

ಆರೋಪಿಯಾದ ನೀವು, ಪಿರ್ಯಾದಾರರ ಸಂಸ್ಥೆಯಿಂದ ರೂ. 1,50,000/- ಇಎಂಪಿಎಲ್ ಲೋನ್ ನ್ನು ದಿನಾಂಕಃ 18.08.2016 ರಂದು ಪಡೆದು, ನಿಮ್ಮ ಖಾತೆ ಇರುವ ಕಾರ್ಪೋರೇಷನ್ ಬ್ಯಾಂಕ್, ಸಾಗರ ಶಾಖೆಗೆ ಸೇರಿದ ಚೆಕ್ ನಂ. 307953 ರ ಮೇಲೆ ರೂ. 1,50,000/- ಮತ್ತು ದಿನಾಂಕಃ 13.07.2018 ನಮೂದಿಸಿ, ಸದರಿ ಚೆಕ್ ನಲ್ಲಿ ಬರೆದ ಹಣ ನಿಮ್ಮ ಖಾತೆಯಲ್ಲಿ ಇಲ್ಲ ಎನ್ನುವ ವಿಚಾರ ಗೊತ್ತಿದ್ದೂ ಕೂಡ ಕೊಟ್ಟಿರುತ್ತೀರಿ.

ನಂತರ, ಫಿರ್ಯಾದುದಾರರು ದಿನಾಂಕಃ 13.07.2018 ರಂದು ತಮ್ಮ ಖಾತೆ ಇರುವ ಕೆಟಿಕೆ ಬ್ಯಾಂಕ್, ಸಾಗರ ಶಾಖೆಗೆ ನೀವು ನೀಡಿದ ಚೆಕ್ಕನ್ನು ಸಲ್ಲಿಸಿದಾಗ, 'Funds insufficient' ಎಂಬ ಹಿಂಬರಹದೊಂದಿಗೆ ದಿನಾಂಕಃ 13.07.2018 ರಂದು ವಾಪಾಸ್ಸು ಬಂದಿರುತ್ತದೆ. ನಿಮ್ಮ ಖಾತೆಯಲ್ಲಿ ಹಣ ಇಲ್ಲ ಎನ್ನುವ ವಿಚಾರ ಪಿರ್ಯಾದಿದಾರರಿಗೆ ತಿಳಿದ ನಂತರ, ದಿನಾಂಕಃ 11.08.2018 ರಂದು ವಕೀಲರ ಮೂಲಕ ನೋಟಿಸ್ ಕಳುಹಿಸಿದ್ದು, ನಿಮಗೆ ದಿನಾಂಕಃ 21.08.2018 ರಂದು ಜಾರಿಯಾಗಿದ್ದರೂ ಸಹಾ ನೀವು 15 ದಿನಗಳಲ್ಲಿ ಸಾಲವನ್ನು ಮರುಪಾವತಿಸದೇ ಮತ್ತು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲವೆಂಬುದನ್ನು ತಿಳಿದಿದ್ದರೂ, ಫಿರ್ಯಾದುದಾರರಿಗೆ ಮೋಸ, ವಂಚನೆ ಮಾಡಬೇಕೆಂಬ ಉದ್ದೇಶದಿಂದ ಚೆಕ್ಕು ನೀಡಿ, ಆ ಮೂಲಕ ನೀವು, ಎನ್. ಐ. ಆಕ್ಟ್ ಕಲಂ 138 ರಡಿಯಲ್ಲಿ ಅಪರಾಧವೆಸಗಿರುತ್ತೀರಿ ಎಂದು ಈ ಮೂಲಕ ಆಪಾದಿಸಲಾಗಿದ್ದು, ಅದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

(ಆಪಾದನೆಯನ್ನು ದಿನಾಂಕಃ 18.10.2023 ರಂದು ತೆರೆದ ನ್ಯಾಯಾಲಯದಲ್ಲಿ ಮಾಡಲಾಗಿದೆ.)

ಪ್ರಶ್ನೆ. 1. ನಿಮಗೆ ಈ ಪ್ರಕರಣದಲ್ಲಿ ಮಾಡಿರುವ ಆಪಾದನೆ ಅಂಶಗಳನ್ನು ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಲಾಗಿ ಮನವರಿಕೆಯಾಯಿತೇ?
ಉತ್ತರಃ-

ಪ್ರಶ್ನೆ. 2. ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?
ಉತ್ತರಃ-

(ದೀಪ ಕೆ.ಆರ್.)
ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.